ಶ್ರೀ ಎ. ಜೆ. ದೊಡ್ಡಮೇಟಿ.—ಪ್ರಶ್ನೆ (ಅ) ನಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಗಳ ಸಂಬಂಧದಲ್ಲಿ ಒಂದು ಸಮಗ್ರಯೋಜನೆ ಮಾಡಲು ತಜ್ಞರ ಸಮಿತಿ ರಚನೆಯ ಅವಶ್ಯಕತೆ ಗಮನಕ್ಕೆ ಬಂದಿದೆ ಎಂದು ಕೇಳಲ್ಪಟ್ಟಕ್ಕೆ ಬಂದಿಲ್ಲ ಎಂದು ಉತ್ತರ ಹೇಳಿದ್ದೀರಿ. ಹಾಗಾದರೆ ಹಳ್ಳಿ ಗಾಡಿನಲ್ಲಿ ಇವತ್ತು ಸರಿಯಾಗಿಯೇ ಇದೆ. ಯೋಜನೆಯ ಅವಶ್ಯಕತೆಯಿಲ್ಲ ಎಂಬುದು ಇದರ ಅರ್ಥವೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅರ್ಥ ಸ್ಪಷ್ಟವಾಗಿ ಇದೆ. ಮಾನ್ಯ ಸದಸ್ಯರು ಯಾವ ಯಾವ ವಿಷಯಗಳ ಸಲುವಾಗಿ ಸ್ಪೆಷಲ್ ಕಮಿಟಿ ಮಾಡಬೇಕೆಂದು ಸೂಚಿಸಿದ್ದಾರೋ ಆ ಎಲ್ಲ ವಿಷಯಗಳು ತಾಲ್ಲೂಕ್ ಬೋರ್ಡ್ ತಕ್ಷಣೆಯೊಳಗೆ ಬರುತ್ತವೆ. ತಾಲ್ಲೂಕ್ ಬೋರ್ಡಿಗೆ ಸಾಕಷ್ಟು ಅಧಿಕಾರ ಕೊಟ್ಟಿದ್ದೇವೆ. ಇನ್ನು ಹೆಚ್ಚಿಗೆ ಅಧಿಕಾರ ಕೊಡಬೇಕೆಂಬ ಉದ್ದೇಶವಿದೆ. ಆದ್ದರಿಂದ ಪುನಃ ಸ್ಪೆಷಲ್ ಕಮಿಟಿ ರಚನೆ ಮಾಡುವ ಅಗತ್ಯವಿಲ್ಲ.

ಶ್ರೀ ಕೆ. ಲಕ್ಕಪ್ಪ.—ಕೆಲವು ಸಾರಿ ಇಂಥವರಿಗೇ ಹಂಚಬೇಕೆಂದು ಸರಕಾರದವರು ತಾಲ್ಲೂಕ್ ಬೋರ್ಡಿಗೆ ತಿಳಿಸಿರುವುದರಿಂದ ಅವರ ಅಧಿಕಾರ ಕಿತ್ತುಕೊಂಡ ಹಾಗೆ ಆಗಿದೆ ಎನ್ನುವುದು ಗಮನಕ್ಕೆ ಬಂದಿದೆಯೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅಂಥಾದ್ದೇನೂ ಸರಕಾರದ ಗಮನಕ್ಕೆ ಬಂದಿಲ್ಲ. ಅಕಸ್ಮಾತ್ತಾಗಿ ಸೂಚನೆ ಮಾಡಿದ್ದರೆ ತಾಲ್ಲೂಕ್ ಬೋರ್ಡು ಅದನ್ನು ಮಾನ್ಯ ಮಾಡಬಹುದು ಅಥವಾ ಮಾಡದೇ ಇರಬಹುದು, ಅಧಿಕಾರವನ್ನು ಕಿತ್ತುಕೊಂಡಿಲ್ಲ.

ಶ್ರೀ ಕೆ. ಲಕ್ಕಪ್ಪ.—ಇಂಟರ್‌ಫೀರ್ ಮಾಡುವುದು ಅಧಿಕಾರ ಕಿತ್ತುಕೊಂಡ ಹಾಗೆ ಅಲ್ಲವೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.— ಇಂಥ ಕೆಲಸ ಮಾಡಿ ಎಂದು ಹೇಳಿದಾಗ ಅದು ಇಂಟರ್‌ಫೀಅರನ್ಸ್ ಆಗುವುದಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಪ್ರತಿಯೊಂದು ತಾಲ್ಲೂಕು ಬೋರ್ಡಿನವರೂ ತಾಲ್ಲೂಕು ಮಟ್ಟದಲ್ಲಿ ಒಂದೊಂದು ಯೋಜನೆಯನ್ನು ಪ್ರತ್ಯೇಕ ಪ್ರತ್ಯೇಕವಾಗಿ ರಚಿಸುವಂತೆ ಒಂದು ಆದೇಶವನ್ನು ಸರ್ಕಾರದವರು ಕೊಡುವುದಕ್ಕೆ ಅಪೇಕ್ಷಿಸುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಈ ರೀತಿ ಆದೇಶ ಈಗಾಗಲೇ ಹೋಗಿದೆ. ನಮ್ಮ ಮೂರನೇ ಯೋಜನೆ ತಯಾರಾಗಬೇಕಾದರೆ ಈ ರೀತಿ ಗ್ರಾಮ ಪಂಚಾಯತಿ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಯೋಜನೆ ತಯಾರಾಗಿಯೇ, ತಯಾರಾಗಿದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಈ ಆದೇಶದಂತೆ ಎಷ್ಟು ತಾಲ್ಲೂಕು ಬೋರ್ಡಿನವರು ಈ ರೀತಿ ಯೋಜನೆಗಳನ್ನು ಸಿದ್ಧಗೊಳಿಸಿದ್ದಾರೆ ? ಆ ಆದೇಶ ಎಂದು ಹೋಗಿದೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಎಷ್ಟು ತಾಲ್ಲೂಕು ಬೋರ್ಡಿನವರು ಸಿದ್ಧಗೊಳಿಸಿದ್ದಾರೆಂದು ನಾನು ಈಗಲೇ ಹೇಳಲಾರೆ. ಎಲ್ಲಾ ಜಿಲ್ಲಾ ಅಭಿವೃದ್ಧಿ ಮಂಡಲಗಳೂ ಮೂರನೇ ಪಂಚವಾರ್ಷಿಕ ಯೋಜನೆಯ ಬಗ್ಗೆ ತಮ್ಮ ತಮ್ಮ ಅಭಿಪ್ರಾಯವನ್ನು ಕಳುಹಿಸಿದ್ದಾರೆ.

———

9-30 A.M.

Reservation of Seats in Engineering and Medical Colleges in the State.

*Q.—196. Sri G. DUGGAPPA (Holalakere).—

Will the Government be pleased to state :—

(*a*) the percentage of seats reserved for Forward Class, Backward Class and Scheduled Castes and Scheduled Tribes students in Technical Institutions (Medical and Engineering Colleges) affiliated to Karnataka and Mysore Universities (separate figures may be furnished) during 1961-62 and 1962-63 ;

(*b*) the basis on which this percentage has been fixed ?

A.—Sri B. D. JATTI (Minister for Finance) [on behalf of Sri S R. Kanthi (Minister for Education)].—

(*a*) *Vide* Statement given below.

(*b*) Percentage of reservation of seats have been fixed in accordance with the recommendations made by the Backward Classes Committee appointed by Government.

STATEMENT.

Showing the percentage of reservation of seats for students belonging to Forward Class, Backward Class and Scheduled Castes and Scheduled Tribes in Engineering and Medical Colleges during the year 1961-62 and 1962-63.

Sl. No.	Name of Colleges	University to which affiliated	Percentage of reservation			
			Forward Class	Backward Class	Scheduled Castes	Scheduled Tribes
		1961-62				
1	(*a*) Engineering Colleges.	Karnataka	No reservation	30 per cent	15 per cent	3 per cent
	(*b*) Medical Colleges					
2	(*a*) Engineering Colleges.	Mysore	do	do	do	do
	(*b*) Medical Colleges					
		1962-63				
3	(*a*) Engineering Colleges.	Karnataka	No reservation	50 per cent	do	do
	(*b*) Medical Colleges					
4	(*a*) Engineering Colleges.	Mysore	do	do	do	do
	(*b*) Medical Colleges					

Sri G. DUGGAPPA.—Has it come to the notice of Government that in the Engineering and Medical Colleges affiliated to the Karnatak University, the seats given to the Scheduled Castes and Scheduled Tribes are not to the extent reserved for them ?

Sri B. D. JATTI.—If there are not sufficient candidates according to the proportions, the University cannot help and Government also cannot help.

Sri G. DUGGAPPA.—Is it a fact that Government have restricted the reservation only to 5 per cent in those Colleges ?

Sri B. D. JATTI.—The hon. Member knows that under the Constitution, 15 per cent is reserved for the Scheduled Castes and 3 per cent for the Scheduled Tribes. If candidates are not forthcoming to the extent of 18 per cent, who is to be blamed ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸುಪ್ರೀಂ ಕೋರ್ಟು ತೀರ್ಮಾನವಾದ ಮೇಲೆ ಈ ವರದಿ ತಮ್ಮಲ್ಲಿ ಜೀವಂತವಾಗಿ ಇದೆಯೇ !

SRI B. D. JATTI.—The report of the Committee is still alive.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಪಿಜ್ಜ ಹೋಂನಲ್ಲಿ, ಕಬರ್ಡಿನಲ್ಲಿ ಇರುವುದನ್ನೆಲ್ಲಾ ಕೇಳ ತ್ತಿರುವುದು. ಸುಪ್ರೀಂ ಕೋರ್ಟ್ ತೀರ್ಮಾನದ ಬ್ಯಾಕ್ ಗ್ರೌಂಡಿನಲ್ಲಿ Backward Classes Committee ರಿಪೋರ್ಟ್‌ನ್ನು ಪರಿಶೀಲನೆ ಮಾಡುವುದಕ್ಕೆ ಸರ್ಕಾರಕ್ಕೆ ಇನ್ನು ಏನಾದರೂ ಅಧಿಕಾರ ಉಳಿದಿದೆಯೇ—ಇದು ಪ್ರಶ್ನೆ.

SRI B. D. JATTI.—Government has got sufficient authority and power to reconsider and take a decision again. The decision that was taken by the Government of Mysore regarding reservation of seats on the recommendations made by the Backward Classes Committee, has been quashed by the Supreme Court.

MR. SPEAKER.—Question hour is over.

Members' Representations.

SRI V. M. DEO.—I feel that a sort of discourtesy is shown to the Deputy Minister for Education. With your experience you must have known that some times, unwritten laws will prevail over written laws. When the Deputy Minister for Education is there don't you think you are showing a sort of discourtesy to her to by- pass her and answer the supplementaries to this question on behalf of the Minister for Education ?

MR. SPEAKER.—The hon. Member is entitled to think like that.

Before we begin the business, there are two items to-day. One the Motion of Thanks ;the other : Financial. I may mention that for a week we will be going on without any recess. Now we will continue the debate on the Motion of Thanks. Ten minutes to Sri Bheemanna and one hour for the Government for reply. After that, we will take up the voting of demands for Additional and Supplementary Grants and finish the same to-day.

SRI S. M. KRISHNA.—Before we go ahead with the Motion of Thanks, I would like to draw the attention of the Chair to a privilege motion that I sent a few days back.

MR. SPEAKER.—Would you like the Minister for Education to be present on that day ? Better he is here.

MOTION OF THANKS TO THE GOVERNOR'S ADDRESS.

(Debate continued.)

†SRI S. BHEEMANNA (Bhalki).—[Spoke in Hindustani].

† ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಸ್ವಾಮಿ, ರಾಜ್ಯಪಾಲರು ಅಪ್ಪಣೆ ಕೊಡಿಸಿರತಕ್ಕ ಭಾಷಣದ ಮೇಲೆ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಬಹಳ ಸಂತೋಷ. ಕೆಲವು ವಿಧಾಯಕ ಸಲಹೆಗಳನ್ನು ನಮ್ಮ ಪಕ್ಷದವರು ಹಾಗೂ ವಿರೋಧಪಕ್ಷದವರೂ ತಿಳಿಸಿದ್ದಾರೆ. ಆದರೆ ಒಂದು ನನಗೆ ಅನಿಸುತ್ತದೆ ಈ ವಿರೋಧ ಪಕ್ಷದ ಮಾನ್ಯ ಸದಸ್ಯರು ಅನೇಕ ಟೀಕೆಗಳನ್ನು ಮಾಡಿದ್ದಾರೆ. ಕೆಲವು ಸ್ವಾಗತ. ಆದರೆ ಇನ್ನು ಹೆಚ್ಚಿನ ವಿಧಾಯಕ ಸಲಹೆಗಳನ್ನು ಕೊಡಬಹುದಾಗಿತ್ತು ಎಂದು ಅನ್ನಿಸುತ್ತದೆ. ಆ ರೀತಿ ಮಾಡಿಕೊಂಡು ಹೋಗಲು ಎಂದು ಅವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಟೀಕೆ ಮಾಡತಕ್ಕಂಥಾದ್ದೇ ನಾವು ಮಾಡತಕ್ಕ ಕೆಲಸ ಎಂದು ಅವರ ಅಭಿಪ್ರಾಯವಿದ್ದರೆ ಅದಕ್ಕೆ ಸ್ವಲ್ಪ ಭಿನ್ನತೆಯುಂಟು ನನ್ನಲ್ಲಿ. ಆದ್ದರಿಂದ ಹೆಚ್ಚು ಸಲಹೆಗಳನ್ನು ಕೊಡುವುದಕ್ಕೆ ಅವರು ಪ್ರಯತ್ನ ಪಡಬೇಕು ಅದಕ್ಕೆ ವಿನಃ ಯಾವಾಗಲೂ ಸಿಕ್ಕುತ್ತದೆ ಎಂದು